ಆ) ಹಾಗಿದ್ದಲ್ಲಿ ಸಾರ್ವಜನಿಕರ ಈ ಮೂಲಭೂತವಾದ ಅವಶ್ಯಕತೆಯನ್ನು ಇಲಾಖೆ ಕೂಡಲೇ ಪೂರೈಸುವುದೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು): ಅ) ಉಡುಪಿ ತಾಲ್ಲೂಕಿನ ಕೆಂಜೂರು ಮತ್ತು 41 ಶಿರೂರು ಗ್ರಾಮಗಳನ್ನು ಈಗಾಗಲೇ ವಿದ್ಯುದ್ದೀಕರಿಸಲಾಗಿದೆ. ಆದರೆ 41ನೇ ಶಿರೂರು ಗ್ರಾಮದ ಮಜರೆಗಳಾದ ಕಾವಾಡಿ, ನೇಮಟ್ಟು ಮತ್ತು ಅಂಬಡೆ ಬಾಗ್ಯಾರು ಈ ಸ್ಥಳಗಳಿಗೆ ಇದುವರೆಗೆ ವಿದ್ಯುತ್ ಸಂಪರ್ಕ ಒದಗಿಸಿಲ್ಲ.

ಆ) 1994-95ರ ಸಾಲಿನಲ್ಲಿ ಈ ಮಜರೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ವಿಷಯವನ್ನು ಗಮನಿಸಲಾಗುವುದು.

**ಕೇಂದ್ರ ಸರ್ಕಾರದ ಯೋಜನೆ ಅನ್ವಯ ಎಸ್. ಡಬ್ಲ್ಯೂ ಎಂ.ಪಿ. ಸ್ಕೀಮ್ ಅಡಿಯಲ್ಲಿ ಅಂಜನಾಪುರ-ಅಂಬ್ಲಿಗೊಳ ಜಲಾಶಯದ ಅಭಿವೃದ್ಧಿಗೆ ಹಣ ಮಂಜೂರು ಮಾಡುವ ಬಗ್ಗೆ**

448 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಯೋಜನೆ ಅನ್ವಯ (1701 ಹೆಪ್ಪಲ್ಲಿ) ಎಸ್.ಡಬ್ಲ್ಯೂ.ಎಮ್.ಪಿ. ಯೋಜನೆ ಅಡಿಯಲ್ಲಿ ಅಂಜನಾಪುರ-ಅಂಬ್ಲಿಗೊಳ ಜಲಾಶಯದ ಅಭಿವೃದ್ಧಿಗೆ ಹಣ ಮಂಜೂರಾಗಿದೆಯೇ?

ಆ) ಈ ಯೋಜನೆ ಅನ್ವಯ ಈ ಎರಡು ಜಲಾಶಯದ ಅಡಿಯಲ್ಲಿ ಈವರೆಗೆ ಆಗಿರುವ ಪ್ರಗತಿ ಎಷ್ಟು?

ಇ) ಈವರೆಗೆ ಪಾವತಿ ಮಾಡಿರುವ ಹಣವೆಷ್ಟು?

ಈ) ಶಿಕಾರಿಪುರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆ ವತಿಯಿಂದ 2702 ಹೆಪ್ಪ ಕೆಳಗೆ ಕೆರೆ ಕಾಮಗಾರಿ ಕೆಲಸ ನಡೆದಿದ್ದು ಅದೇ ರೀತಿ 2701 ಹೆಪ್ಪ ಕೆಳಗೆ ಕಾಮಗಾರಿ ಕೆಲಸಗಳಾಗಿದ್ದು, ಈ ಬಗ್ಗೆ ಹಣ ಬಿಡುಗಡೆ ಮಾಡದಿರಲು ಕಾರಣವೇನು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಮಂಜೂರಾಗಿದೆ

ಆ)

| ಅಂಜನಾಪುರ | ಅಂಬ್ಲಿಗೊಳ |
|---|---|
| ರೂ. 8.24 ಲಕ್ಷಗಳಷ್ಟು ಪ್ರಗತಿಯಾಗಿರುತ್ತದೆ | ರೂ. 8.76 ಲಕ್ಷ ಗಳಷ್ಟು ಪ್ರಗತಿಯಾಗಿರುತ್ತದೆ. |

ಇ) ಅಂಜನಾಪುರ - ರೂ. 7.00 ಲಕ್ಷಗಳು
ಅಂಬ್ಲಿಗೊಳ - ರೂ. 8.76 ಲಕ್ಷಗಳು

ಈ) ಹಣವನ್ನು ಕಾಲಕಾಲಕ್ಕೆ ಸರಿಯಾಗಿ ಬಿಡುಗಡೆ ಮಾಡಲಾಗಿದೆ.

**ಸಾಗರ ಸೊರಬ, ಶಿಕಾರಿಪುರ 110 ಕೆ.ವಿ. ಸಬ್ ಸ್ಟೇಷನ್ ಮಂಜೂರಾತಿ ಬಗ್ಗೆ**

445 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಗರ - ಸೊರಬ - ಶಿಕಾರಿಪುರ 110 ಕೆ.ವಿ. ಸಬ್ ಸ್ಟೇಷನ್